ಸಿಸಿ 320/2014

ಚಾಸಾ-1/ಪ್ರಾಸಾ-1

**ಸಾಕ್ಷಿಯು ದಿಃ 14.01.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು: ಆರೋಪಿಗಳ ಪರ ವಕೀಲರಿಂದ</u>**

ದಿಃ 30.11.2008 ರಂದು ಬೆಳಿಗ್ಗೆ 11.00 ಗಂಟೆಗೆ ನಾವು ನಡೆದುಕೊಂಡು ಗಸ್ತು ಪ್ರಾರಂಭಿಸಿರುತ್ತೇವೆ. ನಮ್ಮ ಕಛೇರಿಯಿಂದ ಘಟನಾ ಸ್ಥಳಕ್ಕೆ ಸುಮಾರು 7-8 ಕಿ.ಮೀ ಅಂತರ ಇರುತ್ತದೆ. ಅರಣ್ಯದಲ್ಲಿ ಪ್ರಾಣಿಗಳನ್ನು ಭೇಟಿಯಾಡಿದ ಪ್ರಾಣಿಗಳು ಅವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಎಳೆದುಕೊಂಡು ಹೋಗಿ ಶೇಖರಿಸಿ ಇಟ್ಟುಕೊಳ್ಳುತ್ತವೆ ಎಂದರೆ ಸರಿ. ಅದೇ ರೀತಿ ದೊಡ್ಡ ಪ್ರಾಣಿ ಭೇಟೆಯಾಡಿ ತಿಂದು ಉಳಿದ ಮಾಂಸವನ್ನು ಚಿಕ್ಕಪುಟ್ಟ ಪ್ರಾಣಿಗಳು ತೆಗೆದುಕೊಂಡು ಹೋಗಿ ಶೇಖರಿಸಿ ಇಟ್ಟುಕೊಳ್ಳುತ್ತವೆ ಎಂದರೆ ಸರಿಯಲ್ಲ. ನಾವು ಗಸ್ತುವಿಗೆ ಹೋಗುವಾಗ ಸಾಮಾನ್ಯವಾಗಿ ಗನ್ ಮತ್ತು ವಾಕಿಟಾಕಿ ಹಾಗೂ ಕ್ಯಾಮೇರಾ ವನ್ನು ಮಾತ್ರ ತೆಗೆದುಕೊಂಡು ಹೋಗಿರುತ್ತೇವೆ. ಜಿಂಕೆಯ ಕಾಲುಗಳು ಸಿಕ್ಕಿದವು ಎನ್ನುವ ಸ್ಥಳದಿಂದ ರಾಷ್ಟ್ರೀಯ ಹೆದ್ದಾರಿಗೆ ಸುಮಾರು 30 ಮೀಟರ್ ಅಂತರ ಇರುತ್ತದೆ. ಆ ದಿನ ಸಿಕ್ಕಿದ ಜಿಂಕೆಯ ಕಾಲುಗಳು ಎಷ್ಟು ಸಮಯದ ಹಿಂದೆ ಸತ್ತ ಜಿಂಕೆಯ ಕಾಲುಗಳಾಗಿದ್ದವು ಎಂದರೆ ಇನ್ನು ತಾಜಾತನದಲ್ಲಿ ಇದ್ದವು ಎಂದು ನುಡಿಯುತ್ತಾರೆ. ಆ ದಿನ ಸಿಕ್ಕಿದ ಜಿಂಕೆಯ ಎರಡೂ ಕಾಲುಗಳು ಅಕ್ಕಪಕ್ಕದಲ್ಲಿ ಬಿದ್ದಿದವು. ಘಟನಾ ಸ್ಥಳದ 30 ಮೀಟರ್ ಪಕ್ಕದಲ್ಲಿ ಗುಂಡ್ಲುಪೇಟೆ ಮತ್ತು ಸುಲ್ತಾನ್ ಭತೇರಿ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ರಾತ್ರಿ 9.00 ರಿಂದ ಬೆಳಿಗ್ಗೆ 6.00 ಗಂಟೆಯವರೆಗೆ ವಾಹನಗಳ ಸಂಚಾರ ನಿರ್ಭಂದ ಇರುತ್ತದೆ ಎಂದರೆ ಸಾಕ್ಷಿಯು ಆ ಸಂದರ್ಭದಲ್ಲಿ ನಿರ್ಭಂದ ಇರಲಿಲ್ಲ ಮತ್ತು ಈ ರೀತಿ ರಾತ್ರಿ ಶಿಖಾರೆ ಮಾಡುತ್ತಿದ್ದ ಕಾರಣದಿಂದಲೇ ನಂತರ ವಾಹನಗಳ ನಿರ್ಭಂದ ಹೇರಲಾಗಿದೆ ಎಂದು ನುಡಿಯುತ್ತಾರೆ.

2. ನಮ್ಮ ಕಛೇರಿಯಲ್ಲಿ ರಾತ್ರಿಯ ಪಾಳೆಯಲ್ಲಿಯು ಸಹ ಸಿಬ್ಬಂದಿಗಳು ಕರ್ತವ್ಯದಲ್ಲಿ ಇರುತ್ತಾರೆ ಎಂದರೆ ಸರಿ. ರಾತ್ರಿ ಸಮಯದಲ್ಲಿ ಆ ಸಿಬ್ಬಂದಿ ಗಸ್ತು ಮಾಡುತ್ತಾರೆ ಎಂದರೆ ಸಾಕ್ಷಿಯು ಮಾಹಿತಿ ಇದ್ದಾಗ ಮಾತ್ರ ಗಸ್ತು ಮಾಡುತ್ತಾರೆ ಎಂದು ನುಡಿಯುತ್ತಾರೆ. ರಾತ್ರಿ ವೇಳೆಯಲ್ಲಿ ಯಾವುದಾದರು ವಾಹನ ಅರಣ್ಯದ ಮದ್ಯೆ ನಿಂತುಕೊಂಡರೆ ಬೇರೆ ವಾಹನಗಳ ಸವಾರರು ಅರಣ್ಯ ಸಿಬ್ಬಂದಿಗಳಿಗೆ ಮಾಹಿತಿ ನೀಡುತ್ತಾರೆ ಎಂದರೆ ಸಾಕ್ಷಿಯು ಮಾಡಬಹುದು ಅಥವಾ ಮಾಡದೇ ಇರಬಹುದು ಎಂದು ನುಡಿಯುತ್ತಾರೆ. ರಾತ್ರಿಯ ವೇಳೆ ನಿಶ್ಯಬ್ದ ಇರುವ ಕಾರಣ ಬಂದೂಕಿನಿಂದ

ಗುಂಡು ಸಿಡಿಸಿದರೆ ಸುಮಾರು 8-10 ಕಿ.ಮೀ ದೂರದವರೆಗೂ ಶಬ್ಧ ಕೇಳಿಸುತ್ತದೆ ಎಂದರೆ ಸರಿಯಲ್ಲ. ನಮ್ಮ ಕಛೇರಿಗೆ ಸಿಸಿ ಕ್ಯಾಮೇರಾವನ್ನು ಅಳವಡಿಸಿರಲಿಲ್ಲ. ನಮ್ಮ ಕಛೇರಿಯನ್ನು ದಾಟಿ, ಪೊಲೀಸ್ ಚೆಕ್ ಪೋಸ್ಟ್ ಮತ್ತು ಮೂಳೆಹೊಳೆ ಅರಣ್ಯ ಕಛೇರಿ, ಮುತ್ತಂಗಾ ಫಾರೆಸ್ಟ್ ಚೆಕ್ ಪೋಸ್ಟ್ ಹಾಗೂ ಅಬಕಾರಿ ಚೆಕ್ ಪೋಸ್ಟ್ ಕೇರಳವನ್ನು ದಾಟಿದ ನಂತರ ಕೇರಳದ ಅರಣ್ಯ ಇಲಾಖೆಯವರು ಆರೋಪಿಗಳನ್ನು ಹಿಡಿದಿದ್ದೇವೆ ಎಂದು ನಮಗೆ ಮಾಹಿತಿ ನೀಡಿದ ಸ್ಥಳ ಸಿಗುತ್ತದೆ ಎಂದರೆ ಸರಿ. ಸದರಿ ಎಲ್ಲ ಚೆಕ್ ಪೋಸ್ಟ್ ಗಳಲ್ಲೂ ಸಿಬ್ಬಂದಿಗಳು ಇರುತ್ತಾರೆ ಎಂದರೆ ಸರಿ. ಎಲ್ಲ ವಾಹನಗಳನ್ನು ಪರಿಶೀಲಿಸಿಯೇ ಚೆಕ್ ಪೋಸ್ಟ್ ಗಳ ಮುಂದು ಬಿಡಲಾಗುತ್ತದೆ ಎಂದರೆ ಸಾಕ್ಷಿಯು ಕೆಲವೊಮ್ಮೆ ಪ್ರಯಾಣಿಕರು ಇದ್ದರೆ ಪರಿಶೀಲನೆ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಎಲ್ಲ ವಾಹನಗಳನ್ನು ಪರಿಶೀಲಿಸಲಾಗುತ್ತದೆ ಎಂದರೆ ಸಾಕ್ಷಿಯು ವಾಹನಗಳ ಸಂಚಾರ ದಟ್ಟನೆ ಹೆಚ್ಚಿರುವ ಕಾರಣ ಕೆಲವೊಮ್ಮೆ ಮಾಹಿತಿ ಇರುವಾಗ ಪರಿಶೀಲನೆ ಮಾಡುತ್ತಾರೆ ಇಲ್ಲದಿದ್ದರೆ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ರಾತ್ರಿಯ ವೇಳೆಯಲ್ಲಿ ವಾಹನಗಳ ಸಂಚಾರ ವಿರಳವಾಗಿರುತ್ತದೆ ಎಂದರೆ ಸರಿ.

3. ಜಿಂಕೆಯ ಎರಡೂ ತುಂಡಾದ ಕಾಲುಗಳನ್ನು ವಶಪಡಿಸಿಕೊಂಡಿದ್ದೇವೆ ಎನ್ನಲಾದ ದಿನವೇ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇವೆ. ನಾವು ಆ ದಿನ ಯಾವುದೇ ಗಸ್ತು ಮಾಡಿಲ್ಲ ಮತ್ತು ಜಿಂಕೆಯ ಕಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಹಾಗೂ ಕೇರಳ ಅರಣ್ಯ ಇಲಾಖೆಯ ಸಿಬ್ಬಂದಿಯ ಮಾತು ಕೇಳಿ ಮಾರನೇ ದಿನ ಪ್ರಥಮ ವರ್ತಮಾನ ವರದಿ ಸೃಷ್ಟಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ದಿಃ 30.11.2008 ರಂದು ಪ್ರಕರಣ ದಾಖಲಿಸಿದ್ದೆ ಆದರೆ ಆ ದಿನವೇ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಪ್ರಕಾರ ಅದನ್ನು ದಿಃ 30.11.2008 ರಲ್ಲಿ ದಾಖಲಿಸಿದ್ದು ದಿಃ 01.12.2008ಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ಆ ದಿನ ನಾವು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಜಿಂಕೆಯ ಕಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ಮತ್ತು ಹಾಜರುಪಡಿಸಿದ ದಿನಾಂಕದಂದು ನ್ಯಾಯಾಲಯದ ಮುಂದೆ ದಂಡ ಪ್ರಕ್ರೀಯಾ ಸಂಹಿತೆ ಕಲಂ 200 ಅಡಿಯಲ್ಲಿ ಖಾಸಗಿ ಫಿರ್ಯಾದನ್ನು ದಾಖಲಿಸಿರುವುದಿಲ್ಲ. ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಲಿಖಿತವಾಗಿ ವರದಿ ಮಾಡಿರುತ್ತೇವೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೆವೊ ಇಲ್ಲವೋ ನನಗೆ ಗೊತ್ತಿಲ್ಲ. ಉಳಿದ ಜಿಂಕೆಯ 2 ಕಾಲುಗಳ ಬಗ್ಗೆ

ತನಿಖೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಉಳಿದ 2 ಕಾಲುಗಳು ನಾವು ಹುಡುಕಿದರು ಸಹ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಕೇರಳದ ಅರಣ್ಯ ಸಿಬ್ಬಂದಿಗಳು ನಮ್ಮ ಕಛೇರಿಗೆ ಬಂದಿರುವುದಿಲ್ಲ ಎಂದರೆ ಸರಿ.

4. ನಿಪಿ 3 ರಂತೆ ದಿಃ 17.12.2008 ರಂದು ಮುಂದುವರೆದ ಸ್ಥಳ ಮಹಜರ್ ಮಾಡಲು ಆರೋಪಿಗಳನ್ನು ನಾನೇ ಕೇರಳದಿಂದ ಕರೆದುಕೊಂಡು ಬಂದಿರುತ್ತೇನೆ. ದಿಃ 30.11.2008 ರಂದು ನಿಪಿ 1 ರಂತೆ ಮಹಜರ್ ಮಾಡಿದ ನಂತರ ಬೇರೆ ವಾಹನಗಳನ್ನು ನಾವು ಪರಿಶೀಲನೆ ಮಾಡಿರುವುದಿಲ್ಲ. ಆರೋಪಿಗಳನ್ನು ದಿಃ 17.12.2008 ರಂದು ಬಾಡಿ ವಾರೆಂಟ್ ನ ಮೇಲೆ ಯಾವ ಸಮಯಕ್ಕೆ ಕರೆದುಕೊಂಡು ಬಂದಿದ್ದೆವು ಎಂದು ಈಗ ನೆನಪಿಲ್ಲ. ನಿಪಿ 3 ಸ್ಥಳ ಮಹಜರ್ ನ್ನು ಬೆಳಿಗ್ಗೆ 10.00 ರಿಂದ 10.45ರ ವರೆಗೆ ಜರುಗಿಸಿರುತ್ತೇವೆ. ನಿಪಿ 3 ರಂತೆ ಸ್ಥಳ ಪಂಚನಾ ಿಮ ಜರುಗಿಸಲು ಆರೋಪಿಗಳೇ ಕೃತ್ಯ ಸ್ಥಳವನ್ನು ತೋರಿಸಿರುತ್ತಾರೆ. ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ ಎನ್ನಲಾದ ಮಾಂಸದಲ್ಲಿ ಬುಲೇಟ್ ಇರಲಿಲ್ಲ. ಆರೋಪಿಗಳಿಗೆ ಕನ್ನಡ ಭಾಷೆ ಮಾತನಡಲು ಬರುವುದಿಲ್ಲ ಎಂದರೆ ಸರಿ. ನಿಪಿ 3 ಸ್ಥಳ ಮಹಜರ್ ನಲ್ಲಿ ಮಹಜರ್ ನ ಅಂಶಗಳನ್ನು ಭಾಷಾಂತರಿಸಿರುವ ಬಗ್ಗೆ ನಮೂದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅರಣ್ಯ ರಕ್ಷಕರಾದ ಇಎಸ್.ಎಸ್ ಪ್ರೇಮ್ ದಾಸ್ ರವರು ಮಳಿಯಾಳಂ ಬಲ್ಲವರಾಗಿದ್ದು ಅವರ ಮೂಲಕ ಭಾಷಾಂತರಿಸಿ ತಿಳಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 1 ಮತ್ತು 3 ರಂತೆ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಮತ್ತು ಕೇರಳ ಅರಣ್ಯ ಸಿಬ್ಬಂದಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರಿಂದ 10ನ್ನು ಕೇರಳ ಅರಣ್ಯ ಸಿಬ್ಬಂದಿಗಳು ಕೇಸಿಗಾಗಿ ಸೃಷ್ಟಿಸಿಕೊಂಡು ನಮಗೆ ನೀಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ.